ESTD - 1964

ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ಊಟಿರಸ್ತೆ, ಮೈಸೂರು-೫೭೦ ೦೦೪

50 ವರ್ಷಗಳು

0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ : 19/09/2013

ಪ್ರಕಟಣೆಯ ಕೃಪೆಗಾಗಿ

(ಹಿಂದಿ ದಿವಸ ಆಚರಣೆಯ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ)

## ಸಾಮರಸ್ಯ ಸಮಾಜ ಕಬೀರ್ ಕಂಡ ಕನಸು– ಡಾ. ಕಾಂಬ್ಳೆ ಅಶೋಕ್

'ಕಬೀರ್ ಅವರು ಭಕ್ತಿ ಕಾಲದ ಮಹಾನ್ ಸಂತ. ಹಿಂದುವಾಗಿ ಹುಟ್ಟಿ ಮುಸ್ಲೀಂ ಧರ್ಮದ ಜನರೊಡನೆ ಬೆಳೆದರು. ಭಕ್ತಿಯ ಜೊತೆಗೆ ಸಮಾಜ ಸುಧಾರಣೆಯ ನಿಲುವುಗಳು ಕಬೀರರ ಚಿಂತನೆಗಳಲ್ಲಿವೆ' ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಿಂದಿ ವಿಭಾಗದ ಪ್ರಾಧ್ಯಾಪಕರಾದ ಡಾ. ಕಾಂಬ್ಳೆ ಅಶೋಕ್ ಅವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಹಿಂದಿ ದಿವಸ ಆಚರಣೆಯ ಪ್ರಯುಕ್ತ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. 'ಹಿಂದಿನ ಕಾಲದಲ್ಲಿ ರಾಜ ರಾಜರುಗಳ ನಡುವೆ ಮತ್ತು ಜನತೆಯ ನಡುವೆ ಜಾತಿ, ಮತ ಮತ್ತು ಮೂಢನಂಬಿಕೆಯಿಂದಾಗಿ ಕದನಗಳು ನಡೆಯುತ್ತಿದ್ದವು. ಅಂತಹ ಕಾಲದಲ್ಲಿ ಹುಟ್ಟಿದ ಕಬೀರರು ಸಾಮರಸ್ಯ ಸಮಾಜದ ಕನಸು ಕಂಡರು. ಜನತೆಯಲ್ಲಿ ಜಾಗೃತಿ ಉಂಟು ಮಾಡುವ ಮತ್ತು ಒಗ್ಗೂಡಿಸುವ ಕೆಲಸವನ್ನು ಮಾಡಿದರು' ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನಿವೃತ್ತ ಹಿಂದಿ ಪ್ರಾಧ್ಯಾಪಕರಾದ ತಿಪ್ಪೇಸ್ವಾಮಿಯವರು 'ಹಿಂದಿ ರಾಜ್ಯಭಾಷೆ, ರಾಷ್ಟ್ರಭಾಷೆ ಮತ್ತು ಸಂಪರ್ಕಭಾಷೆಯಾಗಿದೆ. ಆದರೆ ಅಹಿಂದಿ ಕ್ಷೇತ್ರಗಳಲ್ಲೂ ಹಿಂದಿ ಪ್ರಗತಿ ಕಾಣಬೇಕಿದೆ' ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಅವರು ಮಾತನಾಡುತ್ತಾ 'ಪ್ರಪಂಚದ 8000 ಭಾಷೆಗಳಲ್ಲಿ ಹಿಂದಿ ಪ್ರಮುಖ ಭಾಷೆಯಾಗಿದೆ. ಆದರೆ ಇಂದು ಹಿಂದಿಯನ್ನು ಕಲಿಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಹಿಂದಿ ಕಲಿಕೆಯ ಆಸಕ್ತಿ ಕ್ಷೀಣಿಸುತ್ತಿದೆ. ವಿದ್ಯಾರ್ಥಿಗಳು ಇತರೆ ಭಾಷೆಗಳ ಜೊತೆ ಹಿಂದಿಯನ್ನು ಕಲಿಯಬೇಕು' ಎಂದು ಹೇಳಿದರು.

ಹಿಂದಿ ವಿಭಾಗದ ಉಪನ್ಯಾಸಕಿಯಾದ ಸಿದ್ದಗಂಗಮ್ಮ ಅವರು ಸ್ವಾಗತಿಸಿದರು. ಕು. ಪ್ರೀತಿ ಪ್ರಾರ್ಥಿಸಿದರು. ಅನ್ಸಾರ್ ವಂದಿಸಿದರು. ಕು. ರೀತು ನಿರೂಪಿಸಿದರು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಪ್ರಾಂಶುಪಾಲರು

ಪ್ರಾಚಾರ್ಯರು
... ಎಸ್. ಎಸ್. ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು–570 004

ಗೆ,
ಸಂಪಾದಕರು